ಪಿ ಡಬ್ಲುಃ 1.

ಸಾಕ್ಷಿಯನ್ನು ದಿನಾಂಕಃ **09-02-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಎಸ್ ಜಿ ಸಿ., ವಕೀಲರಿಂದಃ**

ನಾನು ಹೊನ್ನಾವರ ಜನತಾ ಕೋ-ಆಪರೇಟಿವ ಸೊಸೈಟಿಯ ಮ್ಯಾನೇಜರ್ ಆಗಿ ದಿಃ 13-05-2019 ರಂದು ಅಧಿಕಾರ ವಹಿಸಿಕೊಂಡಿರುತ್ತೇನೆ. ಸಾಲದ ವ್ಯವಹಾರವು ನನ್ನ ಗಮನದಲ್ಲಿತ್ತು. ಇದು ಸೆಕ್ಯೂರ್ಡ ಪರ್ಸನಲ್ ಲೋನ ಆಗಿರುತ್ತದೆ. ಒಬ್ಬ ವ್ಯಕ್ತಿಗೆ ಸಾಲ ನೀಡಬೇಕಾದರೆ ಒಬ್ಬ ವ್ಯಕ್ತಿಯ ವೇತನ ಪಟ್ಟಿ ಹಾಗೂ ಜಾಮೀನುದಾರರನ್ನು ತೆಗೆದುಕೊಳ್ಳುತ್ತೇವೆ. ವೇತನ ಪ್ರಮಾಣ ಪತ್ರವನ್ನು ಒಬ್ಬ ವ್ಯಕ್ತಿಯ ಸಾಲ ಬಾಕಿ ಆದರೆ ಅಮಲ್ಜಾರಿ ಪ್ರಕರಣಕ್ಕಾಗಿ ಪಡೆಯುತ್ತೇವೆ. ನಾವು ಅಗ್ರಿಮೆಂಟ್ ನಲ್ಲಿ ಸಿವಿಲ್ ಪ್ರಕರಣದ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ ಎಂದು ಕರಾರು ಮಾಡಿರುತ್ತೇವೆ ಎಂದರೆ ಸರಿ. ಅದೇ ರೀತಿ ಆರೋಪಿ ಬಳಿ ಕರಾರನ್ನು ಮಾಡಿಕೊಂಡಿದ್ದೇವೆ. ಭದ್ರತೆಗಾಗಿ ನಾವು ಯಾರದ್ದೂ ಚೆಕ್ ಪಡೆದಿದ್ದು ಇರುವುದಿಲ್ಲ. ನಾವು ಕರಾರಿನ ಪ್ರಕಾರ ಸಿವಿಲ್ ಪ್ರಕರಣ ದಾಖಲಿಸದೇ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದು ತಪ್ಪು ಎಂದರೆ ಸರಿಯಲ್ಲ. ನಾವು ಆರೋಪಿತನಿಗೆ ಒಂದುವರೆ ಲಕ್ಷ ಸಾಲ ಮಂಜೂರಿ ಮಾಡಿದ್ದೇವೆ. ಸಾಲವನ್ನು ದಿಃ 10-11-2020 ರಂದು ಮಂಜೂರು ಮಾಡಿದ್ದೇವೆ. ಮೂರು ವರ್ಷದ ಕಂತಾಗಿತ್ತು, ಪ್ರತಿತಿಂಗಳು 6 ಸಾವಿರ ತುಂಬಬೇಕಿತ್ತು. ಆರೋಪಿತನು ಒಂದು ರೂಪಾಯಿ ತುಂಬಿದ್ದು ಇರುವುದಿಲ್ಲ. ಪ್ರಕರಣ ದಾಖಲಾದ ನಂತರ ಮಾರ್ಚ 2025 ರಲ್ಲಿ 10 ಸಾವಿರ ತುಂಬಿದ್ದಾರೆ. ಆರೋಪಿತನು ಒಟ್ಟು 1 ಲಕ್ಷದ 50 ಸಾವಿರ ಸಾಲ ಪಡೆದಿದ್ದು, ಆತನ ಜಾಮೀನುದಾರ 77,600/- ಅದೇ ರೀತಿ ಆರೋಪಿತ 77,600/- ರೂಪಾಯಿ ಚೆಕ್ಕನ್ನು ಅವರೇ ಬಂದು ಕೊಟ್ಟಿರುತ್ತಾರೆ. ಜಾಮೀನುದಾರರು ಸೀತರಾಮ ಈಶ್ವರ ನಾಯ್ಕ ಆಗಿದ್ದರು. ನಾನು ಫಿರ್ಯಾದಿಯಲ್ಲಿ ಆರೋಪಿತನು ಎಷ್ಟು ಸಾಲ ಪಡೆದಿದ್ದಾನೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಫಿರ್ಯಾದಿಯನ್ನು ತೋರಿಸಲಾಗಿ ಆರೋಪಿತನ ಎಷ್ಟು ಸಾಲ ಪಡೆದಿದ್ದಾನೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಾವು ಆರೋಪಿತನಿಂದ 77,600/- ಬರಲಿದೆ ಎಂದು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ವಾಸ್ತವಾಂಶವನ್ನು ಮುಚ್ಚಿಟ್ಟು ಈ ಪ್ರಕರಣವನ್ನು ದಿಃ 28-06-2021 ರಂದು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಅಧಿಕಾರ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ಜಾಮೀನುದಾರನು ಒಂದೇ ಬಾರಿ ಬ್ಯಾಂಕಿಗೆ ಬಂದು ಚೆಕ್ಕನ್ನು ನೀಡಿದರು. ಆರೋಪಿತ ಹಾಗೂ ಜಾಮೀನುದಾರರು ನಮೂದಿಸಿದ ಮೊತ್ತವನ್ನು ಅವರೇ ಬರೆದು ಕೊಟ್ಟಿದ್ದಾರೆ. ಈ ಚೆಕ್ಕಿನಲ್ಲಿರುವ ಸಹಿ ಮತ್ತು ಬರವಣಿಗೆ ಬೇರೆ ಬೇರೆ ಎಂದರೆ ನನಗೆ ಗೊತ್ತಿಲ್ಲ. ಜಾಮೀನುದಾರರು ಎಷ್ಟು ಕಲಿತಿದ್ದಾರೆ ಎಂದು ಗೊತ್ತಿಲ್ಲ. ಆರೋಪಿತನ ಚೆಕ್ಕನ್ನು ಬರವಣಿಗೆ ತಜ್ಞರಿಗೆ ಕಳುಹಿಸಲು ಯಾವುದೇ ತೊಂದರೆ ಇಲ್ಲ. ಆರೋಪಿತರಿಂದ ಬೇರೆ ಯಾವುದಾದರೂ ಚೆಕ್ಕನ್ನು ಪಡೆದಿರುವುದಿಲ್ಲ. ಆರೋಪಿತನಿಗೆ ಸಾಲ ನೀಡಬೇಕಾದರೆ ಭದ್ರತೆಗೆ ಪಡೆದ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತನಿಂದ ಯಾವುದೇ ಕಂತು ಬಾಕಿ ಇಲ್ಲದಿದ್ದರೂ ಕೇವಲ ಸಾಲಕ್ಕೆ ಸಂಬಂಧಿಸಿದಂತೆ ಸಾಲ ಪಡೆಯುವ ಸಂದರ್ಭದಲ್ಲಿ ಭದ್ರತೆಗಾಗಿ ನೀಡಿದ ಚೆಕ್ಕನ್ನು

ದುರುಪಯೋಗಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಆರೋಪಿತನಿಂದ ಚೆಕ್ಕನ್ನು ದುರುಪಯೋಗ ಪಡಿಸಿ ಯಾವುದೇ ಹಣ ಬಾಕಿ ಇಲ್ಲದೇ ಇದ್ದರೂ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತನಿಗೆ ಎಷ್ಟು ಸಾಲ ನೀಡಿದ್ದೆವು ಎಂಬ ಅಂಶ ಬರೆಯದೇ ಇದ್ದುದ್ದರಿಂದ ಈ ಪ್ರಕರಣ ಊರ್ಜಿತವಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ಕು ಸಾಲಕ್ಕೆ ಸಂಬಂಧಪಟ್ಟಂತೆ ಕೊಟ್ಟದ್ದು ಹೊರತಾಗಿ ಸಾಲ ವಸೂಲಾತಿಗೆ ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಏನೂ ತಪ್ಪು ಮಾಡದೇ ಇದ್ದರೂ ಭದ್ರತೆಗಾಗಿ ಪಡೆದ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**